# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **321 (456)** |
| ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 10/07/2023 |
| ಉತ್ತರಿಸುವ ಸಚಿವರು | ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಬೀದರ್ ಜಿಲ್ಲಯ ಬಿಮ್ಸ್ ಮಹಾವಿದ್ಯಾಲಯದಲ್ಲಿ 2018-19ರಲ್ಲಿ ನಡೆದ ಸುಮಾರು 18 ಕೋಟಿ ರೂಪಾಯಿಯ ಹಗರಣದ ಬಗ್ಗೆ ಸರ್ಕಾರವು ಎ.ಸಿ.ಬಿ. ಗೆ ವಹಿಸಲಾಗಿದ್ದು, ಈ ಪ್ರಕರಣ ಯಾವ ಹಂತದಲ್ಲಿದೆ; (ವಿವರವಾದ ಮಾಹಿತಿ ನೀಡುವುದು) | 2018-19ರಲ್ಲಿ ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಬೀದರ್‌ನಲ್ಲಿ ನಡೆದಿದೆ ಎನ್ನಲಾದ ಸುಮಾರು 18.00 ಕೋಟಿ ರೂಪಾಯಿಯ ಅವ್ಯವಹಾರಕ್ಕೆ ಸಂಬಂಧಿಸಿದ ACB ತನಿಖೆಯನ್ನು ನ್ಯಾಯಾಲಯದ ನಿರ್ದೇಶನದಂತೆ ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ. ಸದರಿ ಪ್ರಕರಣದಲ್ಲಿ ದಿನಾಂಕ 29.06.2018ರಂದು ನೀಡಲಾಗಿರುವ ಅಭಿಯೋಜನಾ ಮಂಜೂರಾತಿಗೆ W.P. No.28544/2018, W.P.No. 29892-95/2018, W.P. No.38416/2018 ಮತ್ತು W.P. No.1613/2019 ರಲ್ಲಿ ಆಪಾದಿತ ಅಧಿಕಾರಿಗಳು/ಸಿಬ್ಬಂದಿಗಳು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು/ ಕಲಬುರಗಿಯಲ್ಲಿ ಮಧ್ಯಂತರ ತಡೆಯಾಜ್ಞೆ ಪಡೆದಿರುತ್ತಾರೆ. ಈ ಸಂಬಂಧ ಪಡೆಯಲಾಗಿರುವ ಮಧ್ಯಂತರ ತಡೆಯಾಜ್ಞೆ ತೆರವುಗೊಳಿಸಲು ಕ್ರಮವಹಿಸಲಾಗುತ್ತಿದೆ. |
| (ಆ) | ಈ ಪ್ರಕರಣದಲ್ಲಿ ಸುಮಾರು 10 ಜನ ಅಧಿಕಾರಿ/ಸಿಬ್ಬಂದಿಗಳು ಶಾಮೀಲಾಗಿದ್ದಾರೆಂದು ಹೇಳಲಾಗಿದ್ದು, ಆ ಸಿಬ್ಬಂದಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮ ಯಾವುದು; | 1. ಡಾ\|\| ಚನ್ನಣ. ಚಿ (ಹಿಂದಿನ ನಿರ್ದೇಶಕರು,) ಮಾತೃ ಸಂಸ್ಥೆಯಾದ ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿಗೆ ಕರ್ತವ್ಯಕ್ಕೆ ವರದಿ ಮಾಡಿಕೊಂಡು ವಯೋನಿವೃತ್ತಿ ಹೊಂದಿರುತ್ತಾರೆ. ಇವರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಲಾಗಿರುತ್ತದೆ. ಈ ವಿಚಾರಣಾ ಆದೇಶಕ್ಕೆ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ ಅರ್ಜಿ ಸಂಖ್ಯೆ:WP No. 1677/2021ರಲ್ಲಿ ಮಧ್ಯಂತರ ತಡೆಯಾಜ್ಞೆ ನೀಡಿದೆ. ಸದರಿಯವರ ಪಿಂಚಣಿ ಸೌಲಭ್ಯವನ್ನು ತಡೆಹಿಡಿಯಲಾಗಿದೆ.<br><br>2. ಡಾ\|\| ಶಿವಕುಮಾರ ಶೆಟಕಾರ್, ವೈದ್ಯಕೀಯ ಅಧೀಕ್ಷಕರು, ಬ್ರೀಮ್ಸ್ ಬೀದರ್ ಇವರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಲಾಗಿರುತ್ತದೆ. ಈ ವಿಚಾರಣಾ ಆದೇಶಕ್ಕೆ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ ಅರ್ಜಿ ಸಂಖ್ಯೆ:WP No. 1677/2021ರಲ್ಲಿ ಮಧ್ಯಂತರ ತಡೆಯಾಜ್ಞೆ ನೀಡಿದೆ.<br><br>3. ಶ್ರೀ ಆನಂದಸಾಗರ ರೆಡ್ಡಿ, (ಹಿಂದಿನ ಮುಖ್ಯ ಆಡಳಿತಾಧಿಕಾರಿಗಳು) ಇವರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಲಾಗಿರುತ್ತದೆ. ಈ ವಿಚಾರಣಾ ಆದೇಶಕ್ಕೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿ ಬೆಂಗಳೂರು ತಡೆಯಾಜ್ಞೆ ನೀಡಿದೆ.<br><br>4. ಶ್ರೀಮತಿ ಅನುಸೂಯಾ, (ಹಿಂದಿನ ಸಹಾಯಕ ಆಡಳಿತಾಧಿಕಾರಿಗಳು) ಸದರಿಯವರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಲಾಗಿರುತ್ತದೆ. ಮುಂದುವರೆದು ಸದರಿಯವರನ್ನು ಮಾತೃ ಇಲಾಖೆಯಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಿಂದಿರುಗಿಸಲಾಗಿದೆ.<br><br>5. ಶ್ರೀ ಬಾಬು ಕೋಟೆ, (ಹಿಂದಿನ ಕಛೇರಿ ಅಧೀಕ್ಷಕರು) ಸದರಿಯವರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಲಾಗಿರುತ್ತದೆ. ಮುಂದುವರೆದು ಸದರಿಯವರನ್ನು ಮಾತೃ ಇಲಾಖೆಯಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಿಂತಿರುಗಿಸಲಾಗಿದೆ. |

| | | |
|---|---|---|
| | | 6. ಶ್ರೀ ಪ್ರಕಾಶ ಮಡಿವಾಳ (ಹಿಂದಿನ ಕಛೇರಿ ಅಧೀಕ್ಷಕರು) ಸದರಿಯವರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಲಾಗಿರುತ್ತದೆ. ಮುಂದುವರೆದು ಸದರಿಯವರನ್ನು ಮಾತೃ ಇಲಾಖೆಯಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಿಂತಿರುಗಿಸಲಾಗಿದೆ.<br>7. ಶ್ರೀ ಪ್ರಕಾಶ ಮಾಳಗೆ, (ಹಿಂದಿನ ಪ್ರಥಮ ದರ್ಜೆ ಸಹಾಯಕರು) ಸದರಿಯವರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಲಾಗಿರುತ್ತದೆ. ಮುಂದುವರೆದು ಸದರಿಯವರನ್ನು ಮಾತೃ ಇಲಾಖೆಯಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಿಂತಿರುಗಿಸಲಾಗಿದೆ.<br>8. ಶ್ರೀಮತಿ ವರ್ಷಾ ದೇಶಮುಖ, ಪ್ರ.ದ.ಸ. ಸದರಿಯವರು ಅಮಾನತ್ತುಗೊಂಡು ಮರುಸ್ಥಾಪನೆಗೊಂಡಿರುತ್ತಾರೆ.<br>9. ಶ್ರೀ ಮಾಚಾ ಕಲ್ಲಪ್ಪಾ, (ಹಿಂದಿನ ನಿವೃತ್ತ ಕಛೇರಿ ಅಧೀಕ್ಷಕರು) ಮರಣ ಹೊಂದಿರುತ್ತಾರೆ.<br>10. ಶ್ರೀ ಶಿವಾಜಿ ಹೊರಗುತ್ತಿಗೆ ನೌಕರರ ಪ್ರಸ್ತುತವಾಗಿ ಬ್ರೀಮ್ಸ್ ಬೋಧಕ ಆಸ್ಪತ್ರೆ, ಬೀದರ್ ನಿಂದ ಬಿಡುಗಡೆಗೊಳಿಸಲಾಗಿದೆ |
| (ಇ) | ಸುಮಾರು 5 ವರ್ಷಗಳು ಗತಿಸಿದರೂ ತನಿಖೆ ಮುಗಿಯದಿರಲು ಕಾರಣವೇನು; ಈ ಹಗರಣದಲ್ಲೇನಾದರೂ ಪ್ರಭಾವಿಗಳು ಶಾಮೀಲಾಗಿದ್ದಾರೆಯೇ? (ವಿವರ ನೀಡುವುದು) | ಶ್ರೀ ಮಾಚಾ ಕಲ್ಲಪ್ಪಾ, (ಹಿಂದಿನ ನಿವೃತ್ತ ಕಛೇರಿ ಅಧೀಕ್ಷಕರು ಮರಣ ಹೊಂದಿರುತ್ತಾರೆ) ಹಾಗೂ ಶ್ರೀ ಶಿವಾಜಿ, ಹೊರಗುತ್ತಿಗೆ ನೌಕರರು ಇವರುಗಳನ್ನು ಹೊರತುಪಡಿಸಿ ಉಳಿದ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ. ಉಳಿದ 8 ಅಧಿಕಾರಿ/ನೌಕರರುಗಳ ವಿರುದ್ಧ ವೈದ್ಯಕೀಯ ಶಿಕ್ಷಣ ಇಲಾಖೆಯ ವತಿಯಿಂದ ಜಂಟಿ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯನ್ನು ನೇಮಿಸಿ ದಿನಾಂಕ:05/01/2021ರಂದು ಆದೇಶ ಹೊರಡಿಸಿ ಕ್ರಮ ಜರುಗಿಸಲಾಗಿದೆ.<br>ಸದರಿ ಆದೇಶವನ್ನು ಪ್ರಶ್ನಿಸಿ ಡಾ|| ಚನ್ನಣ್ಣ ಸಿ. ಹಾಗೂ ಡಾ|| ಶಿವಕುಮಾರ ಶೆಟಕಾರ ಇವರು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಪಿಟೀಷನ್ ಸಂ: 4177/2021 (S-RES) ದಾಖಲಿಸಿ ದಿನಾಂಕ:26/02/2021 ರಂದು ತಡೆಯಾಜ್ಞೆ ಪಡೆದಿರುತ್ತಾರೆ. ಹಾಗೂ ಶ್ರೀ ಪ್ರಕಾಶ ಎಸ್. ಮಡಿವಾಳ, ಶ್ರೀಮತಿ ವರ್ಷಾ ಹಾಗೂ ಶ್ರೀ ಬಾಬು ಕೋಟಿ ಇವರು ಉಚ್ಚ ನ್ಯಾಯಾಲಯ ಕಲಬುರ್ಗಿ ಪೀಠ ಇಲ್ಲಿ ರಿಟ್ ಪಿಟೀಷನ್ ಸಂ: 200587/2021 ದಾಖಲಿಸಿ ದಿನಾಂಕ:17/03/2021 ರಂದು ಹಾಗೂ ಶ್ರೀ ಆನಂದ ಸಾಗರ್ ರೆಡ್ಡಿ ಇವರು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ರಿಟ್ ಅರ್ಜಿ ಸಂ: 1650/2021ರಲ್ಲಿ ದಿನಾಂಕ:02/06/2021ರಂದು ತಡೆಯಾಜ್ಞೆಯನ್ನು ಪಡೆದಿರುತ್ತಾರೆ. ಸದರಿ ತಡೆಯಾಜ್ಞೆಗಳನ್ನು ತೆರವುಗೊಳಿಸಲು ಸರ್ಕಾರಿ ವಕೀಲರನ್ನು ಅಧಿಕೃತಗೊಳಿಸಿ ರಂದು ಸರ್ಕಾರಿ ವಕೀಲರಿಗೆ ಕಂಡಿಕೆವಾರು ಷರಾಗಳನ್ನು ಒದಗಿಸಲಾಗಿರುತ್ತದೆ. ಹಗರಣದಲ್ಲಿ ಯಾವ ಪ್ರಭಾವಿಗಳು ಶಾಮೀಲಾಗಿರುವುದಿಲ್ಲ. |

**ಕಡತ ಸಂಖ್ಯೆ: ಎಂಇಡಿ 242 ಎಂಎಸ್ಎಫ್ 2023**

(**ಡಾ|| ಶರಣಪ್ರಕಾಶ ಆರ್. ಪಾಟೀಲ್** ಎಂ.ಡಿ.)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು